ಎನಿಸಿತು.

'ಆಯ್ತು... ನಾವು ಬಂದ ಕೆಲಸ ಆಗಬೇಕಷ್ಟೇ... ಇಲ್ಲಾ ಅಂದ್ರೆ ನಮ್ಮ ದಾರಿ ಇದ್ದೇ ಇದೆ... ಗೊತ್ತಲ್ಲಾ...?'

ಹಿಂತಿರುಗಿ ಬಂದು ಮತ್ತೆ ಕೂತ ಮಾಯಣ್ಣನನ್ನು ಕುರಿತು–

'ಮಾಯಣ್ಣ... ಮಾಯಣ್ಣ ತಾನೆ ನಿಮ್ಮ ಹೆಸರು?'

ಮಾಯಣ್ಣ ಅವನ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಹೋಗಲಿಲ್ಲ.

'ನಾನು ಮೂವತ್ತು ವರ್ಷದಿಂದ ಸಾರ್ವಜನಿಕ ಜೀವನದಲ್ಲಿ ಇದ್ದೇನೆ... ಇದ್ಯಾವುದು ನನಗೆ ಹೊಸದಲ್ಲ... ಓಕೆ ಹೇಳಿ... ನಿಮಗೆ ಏನು ತಿಳಿಬೇಕು... ಹೇಳೋಣ'.

ಪಕ್ಕದಲ್ಲಿದ್ದ ಫುಲ್ ಬಾಟಲ್ ರಮ್ ಅರ್ಧ ಖಾಲಿ ಆಗಿದ್ದರೂ ನಿಯಂತ್ರಣದಲ್ಲಿದ್ದ ಗಣಪತಿ ಮತ್ತೆ ತಾನೇ ಮುಂದುವರಿಸಿದ.

'ಆಯ್ತು... ಮೊದಲು ನನ್ನ ಹಿನ್ನೆಲೆ ಕೇಳಿ. ನಾನು ಯಾವತ್ತೂ ನನಗೆ ನಾನೇ ಯಾವ ಕಡಿವಾಣವನ್ನೂ ಹಾಕಿಕೊಳ್ಳಲಿಲ್ಲ... ಏನು ಬೇಕೋ ಅದನ್ನು ಮಾಡುತ್ತಿದ್ದೆ... ನನ್ನ ಹೆಂಡತಿ ಇರುವಾಗಲೇ ಇನ್ನೊಬ್ಬ ಹೆಂಗಸನ್ನು ಮನೆಯಲ್ಲೇ ತಂದಿಟ್ಟುಕೊಂಡೆ. ನನ್ನ ಹೆಂಡತಿ ಅವಮಾನ ತಾಳಲಾರದೆ ಇದೇ ನಡುಮನೆಯಲ್ಲಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಇದಕ್ಕೆ ಸಾಕ್ಷಿ ಯಾರು ಗೊತ್ತಾ? ನನ್ನ ಒಬ್ಬನೇ ಮಗ. ಹತ್ತು ವರ್ಷದ ಹುಡುಗ ಶಾಲೆಯಿಂದ ಬಂದವನು ಬೆಂಕಿಯಲ್ಲಿ ಉರಿದು ಹೋಗುತ್ತಿರುವ ತಾಯಿಯನ್ನು ನೋಡಿ ರಕ್ಷಿಸಲು ಮುಂದೆ ಬಂದಿದ್ದಾನೆ, ಆದರೆ ತಾಯಿ ಮಗನಿಗೆ ಅಪಾಯವಾದೀತೆಂದು ಹಾಗೇ ಬೆಂಕಿಯಲ್ಲಿ ಉರಿಯುತ್ತಲೇ ಕೋಣೆಗೆ ಓಡಿ ಬಾಗಿಲು ಹಾಕಿಕೊಂಡಳಂತೆ. ಆ ದಿನ ನಾನು ಕಳೆದುಕೊಂಡಿದ್ದು ಬರೀ ಹೆಂಡತಿಯನ್ನಷ್ಟೇ ಅಲ್ಲ, ಮಗನನ್ನೂ ಕೂಡ. ತಾಯಿಯ ದಾರುಣ ಸಾವಿಗೆ ನಾನೇ ಕಾರಣ ಎಂದು ಅರಿತುಕೊಂಡ ಮಗ ಮುಂದಕ್ಕೆ ಮನೆ ಬಿಟ್ಟು ಓದಿ ಬೆಳೆದದ್ದೆಲ್ಲಾ ಹಾಸ್ಟೆಲ್‌ಗಳಲ್ಲೇ, ಆ ನಂತರ ಸ್ಪೇನ್ ದೇಶದಲ್ಲಿ ಕೆಲಸ ಹಿಡಿದು ಆ ದೇಶದ ನಾಗರಿಕತ್ವವನ್ನೂ ಪಡೆದುಕೊಂಡಿದ್ದಾನೆ. ಆಗಲೇ ನಲವತ್ತು ವರ್ಷ. ಇನ್ನೂ ಮದುವೆ ಇಲ್ಲ. ನಾನು ಎಂದಿಗೂ ಹಿಂತಿರುಗಿ ಬರುವುದಿಲ್ಲ, ಎಂದಿಗೂ ನಿನ್ನನ್ನು ಮತ್ತೆ ನೋಡುವುದಿಲ್ಲ, ನಿನ್ನ ಯಾವ ಆಸ್ತಿಯೂ ನನಗೆ ಬೇಡ ಎಂದು ಕಳೆದ ವರ್ಷ ಅವನು ಬರೆದ ಪತ್ರದೊಂದಿಗೆ ನಮ್ಮ ಸಂಬಂಧ ಪೂರ್ತಿ ಮುಗಿದೇಹೋಯಿತೇನೋ'.

ಮತ್ತೆ ಮುಂದುವರಿಸಲು ಗಣಪತಿ ಮತ್ತೊಂದು ಲೋಟ ರಮ್ ಸುರಿದುಕೊಳ್ಳಬೇಕಾಯಿತು.

'ನಾನು ಬದಲಾಗಲೇ ಇಲ್ಲ... ಮಡಿಕೇರಿ ಠಾಣೆಯಲ್ಲಿ, ಕುಶಾಲನಗರ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್ ಚೆಂಗಪ್ಪ, ಕಾಲು ಜಾರಿ ನದಿಯಲ್ಲಿ ಕೊಚ್ಚಿ ಹೋದರು ಅನ್ನೋ ಕೇಸ್ ಇದೆ. ನೋ. ಅವನನ್ನು ನಾನೇ ಕೈಯಾರೆ ತಳ್ಳಿ ಕೊಲೆ ಮಾಡಿದ್ದು, ಅದರ ನಂತರ ಕೂಡ ಇನ್ನೊಂದು ಕೊಲೆ ಮಾಡಿಸಿದ್ದೇನೆ. ಬೇರೆ ಇನ್ನಾರಿಗಾದರೂ ಇಷ್ಟು ಸಾಕಿತ್ತೇನೊ, ಆದರೆ ನನ್ನಲ್ಲಿ ಯಾವ ಬದಲಾವಣೆಯಾಗಲಿ ಸುಧಾರಣೆಯಾಗಲಿ ಆಗಲೇ ಇಲ್ಲ. ಅದು ಆಗಲು ಆರಂಭವಾಗಿದ್ದು ಮೊನ್ನೆ ಮೂರು ತಿಂಗಳ ಹಿಂದೆ...

'ನನಗೆ ಶ್ವಾಸಕೋಶದ ಕ್ಯಾನ್ಸರ್ ಆಗಿದೆ, ಸಾಕಷ್ಟು ಉಲ್ಬಣ ಸ್ಥಿತಿಯಲ್ಲಿದೆ. ಇನ್ನು ಆರು ತಿಂಗಳ ಕಾಲಾವಕಾಶವಷ್ಟೇ ಇರುವುದು ಎಂದು ಡಾಕ್ಟರ್ ಹೇಳಿದಾಗ...'

ಖಾಲಿಯಾಗಿದ್ದ ಲೋಟಕ್ಕೆ ಇನ್ನಷ್ಟು ಸುರುವಿಕೊಂಡ ಗಣಪತಿ ತನ್ನ ಜೀವಮಾನದ ಅಂತಿಮ ಹೇಳಿಕೆ ಕೊಟ್ಟು ಹೋಗುವ ತವಕಕ್ಕೆ ಬಿದ್ದಂತೆ.

'ನನ್ನ ತಂಗಿ... ಅಂದರೆ ನಮ್ಮ ಈ ನಾಚಯ್ಯನ ತಾಯಿ, ಅವಳು ಕ್ಯಾನ್ಸರ್ ರೋಗಿ... ನನ್ನ ಮತ್ತು ಅವಳಂತಹ, ಅಂತಿಮ ಘಟ್ಟದಲ್ಲಿರುವವರಿಗೆ ಮೈಸೂರಿನಲ್ಲಿ ಒಂದು ಸೇವಾ ಕೇಂದ್ರ ಇದೆ. ನನ್ನ ಎಲ್ಲಾ ಆಸ್ತಿಯನ್ನು ಇಂದೇ ಆ ಸೇವಾಕೇಂದ್ರಕ್ಕೆ ಬರೆದು, ನಾಳೆಯಿಂದ ಎರಡು ಹೊತ್ತಿನ ಊಟಕ್ಕಾಗಿ ಮಾತ್ರ, ಇನ್ನೆಷ್ಟು ದಿನವೋ ಅಷ್ಟು ದಿನ ಕಳೆದು ಈ ಪಾಪಿ ಜೀವನಕ್ಕೆ ಗುಡ್ ಬೈ ಹೇಳುತ್ತೇನೆ'.

ಇನ್ನೂ ಮುಗಿದಿಲ್ಲವೆನ್ನುವಂತೆ–

'ಹೇಳಿ ಪೊಲೀಸ್ ಆಫೀಸರ್ ಮಾಯಣ್ಣ, ನನ್ನ ಈ ಮನಸ್ಥಿತಿಯಲ್ಲಿ ನಾನು ಮೊನ್ನೆ ನಡೆದ ಅಮ್ಮುವಿನ ಕೊಲೆ ಮಾಡಿರಬಹುದಾ ಅಥವಾ ಮಾಡಿಸಿರಬಹುದಾ... ಅದು ಅಂದೆಂದೋ ಆವೇಶದಲ್ಲಿ ಆಡಿದ ಮಾತು. ಅದಕ್ಕೆ ಹೆಚ್ಚಿನ ಅರ್ಥ ಬೇಡ'.

ಮಾಯಣ್ಣ ಅಲ್ಲೇ ಟೀಪಾಯಿಯ ಮೇಲೆ ಬಿದ್ದಿದ್ದ ಒಂದು ಫೈಲ್ ಕೈಗೆತ್ತಿಕೊಂಡು ತಿರುವಿ ನೋಡಲು ಅದು ಮೈಸೂರಿನ ಕ್ಯಾನ್ಸರ್ ಆಸ್ಪತ್ರೆಯವರು ಕೊಟ್ಟ ಗಣಪತಿಯ ಮೆಡಿಕಲ್ ರಿಪೋರ್ಟ್ ಮತ್ತು ಎಕ್ಸರೇ ಫೋಟೋಗಳಾಗಿತ್ತು. ಎಕ್ಸರೇ ಫೋಟೊಗಳನ್ನು ಬೆಳಕಿಗೆ ಹಿಡಿದು ನೋಡಲು ಬಲಗಡೆಯ ಶ್ವಾಸಕೋಶ ಪೂರ್ತಿ ಮತ್ತು ಎಡಗಡೆ ಶ್ವಾಸಕೋಶ ಅರ್ಧದಷ್ಟು ಆಗಲೇ ಆವರಿಸಿಕೊಂಡಿದ್ದ ಕ್ಯಾನ್ಸರ್, ಗಣಪತಿ ಹೇಳಿಕೊಂಡಿದ್ದನ್ನು ಪೂರ್ತಿಯಾಗಿ ಸಮರ್ಥಿಸುವಂತಿತ್ತು.

'ಗಣಪತಿಯವರೆ, ಮತ್ತೆ ನಮಗೆ ಏನಾದರೂ ವಿವರಗಳು ಬೇಕಾದರೆ ಬರ್ತೀವಿ...'

'ಬನ್ನಿ... ಆದರೆ ಇಲ್ಲಲ್ಲ... ಮೈಸೂರು ಉಪಶಮನ ಸೇವಾ ಕೇಂದ್ರ. ಇಂದು ರಾತ್ರಿಗೆ ನನ್ನ ಮತ್ತು ಮಡಿಕೇರಿಯ ನಂಟು ಮುಗೀತು. ನಮಸ್ಕಾರ'.

ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಮಾಯಣ್ಣ ಮತ್ತೆ ಮಡಿಕೇರಿ ಠಾಣೆಗೆ ಬಂದಿದ್ದ. ಪೂವಯ್ಯ ಠಾಣೆಯಲ್ಲೇ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಿದ್ದ. ಊಟ ಮಾಡುತ್ತಲೇ, 'ಏನಾದರೂ ಪಾಸಿಟಿವ್ ಡೆವಲಪ್‌ಮೆಂಟ್ಸ್ ಮಾಯಣ್ಣ?'

'ಇಲ್ಲ ಪೂವಯ್ಯ... ಇಟ್ ಹ್ಯಾಸ್ ಬಿಕಮ್ ವೈಲ್ಡ್ ಗೂಸ್ ಚೇಸ್... ಇದರಲ್ಲಿ ಗಣಪತಿ ಪಾತ್ರ ಏನೂ ಇಲ್ಲ ಅನ್ಸುತ್ತೆ'.

'ಆರ್ ಯು ಶ್ಯೂರ್... ಅವನು ನಟೋರಿಯಸ್ ಕ್ಯಾರೆಕ್ಟರ್...'

'ಯಾವುದಕ್ಕೂ ಗಣಪತಿಯ ಬ್ಯಾಂಕ್ ಟ್ರಾನ್ಸಾಕ್ಷನ್ಸ್, ಕಾಲ್ ರೆಕಾರ್ಡ್, ಆತ ಹೇಳಿದ ಮೈಸೂರಿನ ಸೇವಾ ಕೇಂದ್ರಕ್ಕೆ ಆಸ್ತಿ ವರ್ಗಾವಣೆ, ಎಲ್ಲಾ ಚೆಕ್ ಮಾಡೋದಕ್ಕೆ ಹೇಳಿದ್ದೀನಿ ನಮ್ಮ ವಿನಯ್‌ಗೆ'.

ಊಟ ಮುಗಿಯುತ್ತಲೇ ಠಾಣೆಯ ಆ ಲೇಡಿ ಪೀಸಿ– 'ಸಾರ್, ಆ ಜೀಪ್ ಹುಡುಗ ಬಂದಿದ್ದಾನೆ'

'ಕರೀರಿ'.

ಎದುರಿಗೆ ದೂರದಲ್ಲೇ ನಿಂತ ಸುಮಾರು ಇಪ್ಪತ್ತರ ಯುವಕನ ಕಡೆಗೆ ಮಾಯಣ್ಣ ಒಂದು ದಪ್ಪನೆಯ ಪೊಲೀಸ್ ಲಾಠಿಯನ್ನು, ಕೈಯಿಂದ ಕೈಗೆ ಎಸೆಯುತ್ತಾ ಹಿಡಿಯುತ್ತಾ ದಾಪುಗಾಲಾಕುತ್ತಾ ಧಾವಿಸಿ ಬರುತ್ತಿದ್ದಂತೆ, ಎದುರಿಗಿದ್ದವನ ಜಂಘಾಬಲವೇ ಉಡುಗಿಹೋಗಿತ್ತು.

'ಕೇಳುವ ಪ್ರಶ್ನೆಗಳಿಗೆ ಸುಳ್ಳು ಉತ್ತರ ಕೊಟ್ಟರೆ ಮೈಯಲ್ಲಿ ಒಂದು ಮೂಳೆಯೂ ನೆಟ್ಟಗಿರಲ್ಲ... ಏನೂ...'

'ಇಲ್ಲ ಸಾರ್ ಸುಳ್ಳು ಹೇಳಲ್ಲ...'

'ಗುಡ್... ಅಮ್ಮು ಅವರ ಮನೆಯ ಸಿಸಿಟೀವಿಯಲ್ಲಿ ಎಲ್ಲಾ ರೆಕಾರ್ಡ್ ಆಗಿದೆ... ಏನೂ... ಏನು ನಿನ್ನ ಹೆಸರು?'

'ವಿನೋದ್'.

'ಸೋಮವಾರ ಅಮ್ಮು ಮನೆ ಹತ್ತಿರ ನಿನ್ನ ಜೀಪಲ್ಲಿ ಏನುಕ್ಕೋಗಿದ್ರಿ?'

'ಬೆಂಗಳೂರಿಗೆ ತರಕಾರಿ ಹಾಕೋದ್ದಕ್ಕೆ ಹೋಗಿದ್ವಿ ಸಾರ್... ದಾರಿಯಲ್ಲಿ ಹಾಗೇ ಅಮ್ಮು ಅವರ ಮನೆಗೆ ಹೋಗಬೇಕು ಅಂದ್ರು ರವಿ ಅಣ್ಣ... ಸರಿ, ಅಲ್ಲಿಗೆ ಹೋದ ಮೇಲೆ ದೂರದಲ್ಲೇ ಗಾಡಿ ಪಾರ್ಕ್ ಮಾಡೋದಕ್ಕೆ ಹೇಳಿದರು... ನಾನು ಸುಮಾರು ದೂರದಲ್ಲಿ ಗಾಡಿ ನಿಲ್ಲಿಸಿ ಹಾಗೆ ಸ್ಟೇರಿಂಗ್ ಮೇಲೆ ತಲೆ ಹಾಕಿ ನಿದ್ದೆ ಮಾಡಿದೆ... ರಾತ್ರಿ ಎಲ್ಲ ಡ್ರೈವ್ ಮಾಡಿದ್ದೆನಲ್ಲ... ಆಮೇಲೆ ರವಿ ಅಣ್ಣನೇ ಎಚ್ಚರ ಮಾಡಿ ಕರೆದುಕೊಂಡು ಹೋಗಿದ್ದು'.

'ಎಷ್ಟು ಗಂಟೆಗೆ ಅಲ್ಲಿ ಗಾಡಿ ನಿಲ್ಲಿದ್ದು, ಮತ್ತೆ ಎಷ್ಟು ಗಂಟೆಗೆ ಗಾಡಿ ಎತ್ತಿದ್ದು... ಆಮೇಲೆ ನಿಮ್ಮ ಜೊತೆ ಇನ್ಯಾರಿದ್ರು?'

'ನನಗೆ ಟೈಮ್ ಒಂದೂ ಗೊತ್ತಿಲ್ಲ... ನಾನು ಮತ್ತು ರವಿ ಅಣ್ಣ ಮಾತ್ರ ಜೀಪಲ್ಲಿ ಬಂದದ್ದು'.

'ನೀವು ತರಕಾರಿ ಹಾಕಿದ್ದು ಎಲ್ಲಿ?'

'ಕೆ.ಆರ್. ಪುರಂ ಮಾರುಕಟ್ಟೆಯಲ್ಲಿ'.

'ಅದು ಬಿಟ್ಟು ಇನ್ನೆಲ್ಲಿಗಾದ್ರೂ ಹೋದ್ರಾ, ಇನ್ಯಾರನ್ನಾದ್ರು ಮೀಟ್ ಮಾಡುದ್ರಾ, ಇನ್ನೂ ಎಲ್ಲೆಲ್ಲಿ ಗಾಡಿ ನಿಲ್ಸಿದ್ರೀ, ಎಷ್ಟು ಹೊತ್ತಿಗೆ ವಾಪಸ್ ಮಡಿಕೇರಿಗೆ ಬಂದ್ರಿ ಡೀಟೈಲಾಗಿ ಬರೆದು ನಮ್ಮ ಪೀಸಿಗೆ ಕೊಟ್ಟು ಹೋಗಬೇಕು, ಏನು...'

'ಆಯ್ತು ಸಾರ್...'

ವಿನೋದ್ ತೆರಳಿದ ಮೇಲೆ–

'ವಿನಯ್, ಆ ವಿನೋದ್ ಹೇಳಿದ ಒಂದೊಂದು ಪಾಯಿಂಟು ಚೆಕ್ ಮಾಡಿ... ಕೆ.ಆರ್. ಪುರಂ ಮಾರ್ಕೆಟ್, ದಾರಿಯಲ್ಲಿರುವ ಎಲ್ಲಾ ಟ್ರಾಫಿಕ್